ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

8

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ   ದಿನಾಂಕ : DATE : 13/12/20

# ಸಭಾಪತಿ ಪದಚ್ಯುತಿಗೆ ನಾಡಿದ್ದು ಅಧಿವೇಶನ

## ಅವಿಶ್ವಾಸ ಚರ್ಚೆ, ಬಳಿಕ ಪ್ರತಾಪ್‌ಚಂದ್ರ ವಜಾ? ಹೊರಟ್ಟಿ ಸಭಾಪತಿ, ಬಿಜೆಪಿಗೆ ಉಪಸಭಾಪತಿ ಪಟ್ಟ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು 13/12/20



ಸರ್ಕಾರದ ಸೂಚನೆ ಮೇರೆಗೆ ಮಂಗಳವಾರ ವಿಧಾನ ಪರಿಷತ್ತಿನ ಅಧಿವೇಶನದ ಕಲಾಪ ನಿಗದಿಪಡಿಸಲಾಗಿದೆ. ಈ ಮೂಲಕ ಅಂದು ಸದನದ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅವರ ಪದಚ್ಯುತಿಗೆ ಸಮಯ ನಿಗದಿಯಾದಂತಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಅಂದು ಬೆಳಗ್ಗೆ 11 ಗಂಟೆಗೆ ಅಧಿವೇಶನದ ಕಲಾಪ ಕರೆಯಲಾಗಿದೆ ಎಂದು ಪರಿಷತ್ತಿನ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಶನಿವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ಗುರುವಾರ ಅಧಿವೇಶನವನ್ನು ಸಭಾಪತಿಗಳು ಏಕಾಏಕಿ ಅನಿರ್ದಿಷ್ಟಾವಧಿ ಕಾಲ ಮುಂದೂಡಿದ್ದರು. ಇದನ್ನು ವಿರೋಧಿಸಿ ಬಿಜೆಪಿ ರಾಜಭವನದ ಮೆಟ್ಟಿಲೇರಿ ಸಭಾಪತಿಗಳ ವಿರುದ್ಧ ದೂರು ನೀಡಿತ್ತು. ರಾಜ್ಯಪಾಲರು ಅಡ್ವೋಕೇಟ್ ಜನರಲ್‌ರನ್ನು ಕರೆಸಿ ಚರ್ಚಿಸಿದ್ದರು.

↘8

**ಪಕ್ಷವಾರು ಬಲಾಬಲ**

| | |
|---|---|
| ಬಿಜೆಪಿ | 31 |
| ಕಾಂಗ್ರೆಸ್ | 28 |
| ಜೆಡಿಎಸ್ | 14 |
| ಪಕ್ಷೇತರ | 01 |
| ಸಭಾಪತಿ | 01 |

NP.---9--